Karnataka Rent Control (Amendment) Bill, 1978.

Governor's Recommendation

MR. SPEAKER.—I have received the recommendation of the Governor for consideration of the Karnataka Rent Control Bill, 1978. The Hon. Minister for Revenue to move the amendment Bill.

Motion to Consider

SRI D. DEVARAJ URS (Chief Minister).—I beg to move:

That the Karnataka Rent Control (Amendment) Bill, 1978 may be taken into consideration.

The question was proposed

Sir, the objects and reasons for this amendment bill is already stated in the statement of objects and reasons. Its object is very clear which provides for leasing of buildings and for the control of rates of hotels and lodging houses. The operation of the Rent Control Act would cease after December 1977 and that is why this amendment had to be brought to see that the difficulties faced by the public regarding getting houses at a reasonable rent could be overcome and the present Act which was in existence continued so that the benefits would accrue to those who are in need of rented house. Sir, you are aware in this city of Bangalore which is said to be a fast growing city when compared to any of the metropolitan cities in the country, there is lot of dearth for houses. The growth rate regarding the construction of houses is high but when compared to the fast growth of the city itself it is not commensurate and as well there is necessity for continuance of such an enactment for the benefit of those who are in need of houses. Since the Houses of Legislature were not in session, the Governor had to bring an ordinance in this behalf. This bill merely seeks to replace that ordinance. This is a very simple bill and I command this to the acceptance of this House.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).— ಮಾನ್ಯ ಅಧ್ಯಕ್ಷರೇ ಈ ರೆಂಟ್ ಕಂಟ್ರೋಲ್ ಆಕ್ಟನ್ನು ಮುಂದುವರಿಸುವುದಕ್ಕೆ ಬೆಂಬಲ ಸೂಚಿಸುತ್ತಾ, ಕೆಲವೊಂದು ವಿಚಾರಗಳನ್ನು ಸರ್ಕಾರದ ಅವಗಾಹನೆಗೆ ತರಬಯಸುತ್ತೇನೆ. ಈ ಕಾಯಿದೆಯ ಅವಶ್ಯಕತೆ ಅತ್ಯಂತವಾಗಿದೆ. ೧೯೬೧ರಲ್ಲಿ ಪಾಸಾದ ಈ ಕಾಯಿದೆಯನ್ನು ಇಲ್ಲಿಯವರೆಗೂ ಸರ್ಕಾರ ಮುಂದುವರೆಸಿಕೊಂಡು ಬಂದಿದೆ. ಆದರೆ ಇದರಲ್ಲಿ ಅನೇಕ ತಿದ್ದುಪಡಿಗಳ ಅವಶ್ಯಕತೆ ಇದೆಯೆಂಬ ಮಾತನ್ನು ನಾವು ಪದೇ ಪದೇ ಹೇಳುತ್ತಲೇ ಬಂದಿದ್ದೇವೆ. ಒಂದು ಸಮಗ್ರವಾದ ತಿದ್ದುಪಡಿಯಲ್ಲಿ ಹೊಸ ರೆಂಟ್ ಕಂಟ್ರೋಲ್ ಆಕ್ಟನ್ನು ಕಾಲಾನು ಕ್ರಮಕ್ಕನುಗುಣವಾಗಿ ತರುತ್ತೇವೆಂಬ ಭರವಸೆಯನ್ನು ಸರ್ಕಾರ ಕೊಡುತ್ತಾ ಬಂದಿದೆ. ಆದರೆ ಈ ವೇಳೆಗಾಗಲೇ ಸರ್ಕಾರ ಸಮಗ್ರವಾಗಿ ತಿದ್ದುಪಡಿ ಮಾಡಿದಂತಹ ರೆಂಟ್ ಕಂಟ್ರೋಲ್ ಆಕ್ಟನ್ನು ತರಬೇಕಾಗಿತ್ತು. ಇದು ೧೯೭೨ರಲ್ಲಿ ಒಂದು ಸಾರಿ ಮುಂದುಪರಿದಿದೆ, ಪುನಃ ೩ ವರ್ಷ ಮುಂದುವರಿಸಿದ್ದೇವೆ, ಈಗ ಪುನಃ ಎಕ್ಸ್‌ಟೆಂಡ್ ಮಾಡಿದ್ದೇವೆ. ಉದಾಹರಣೆಗೆ ಬೆಂಗಳೂರು, ಹುಬ್ಬಳ್ಳಿಯಂತಹ ನಗರಗಳಲ್ಲಿ ೧೦-೨೦-೩೦ ವರ್ಷಗಳಿಂದ ಒಂದೊಂದೇ ಮನೆಗಳಲ್ಲಿ ಟೆನೆಂಟ್ಸ್ ಇದ್ದಾರೆ. ಆಂಥ ಕಡೆ ಲ್ಯಾಂಡ್ ಲಾರ್ಡ್ಸ್ ಏನು ಮಾಡುತ್ತಿದ್ದಾರೆಂದರೆ, ಹೆಚ್ಚು ಉತ್ಪನ್ನ ಬರುವುದಿಲ್ಲವೆಂಬ ನೆಪದಿಂದ ಅವರಿಗೆ ಯಾವುದೇ ತರಹದ

ಸೌಕರ್ಯಗಳನ್ನು ಒದಗಿಸಿಕೊಡುತ್ತಿಲ್ಲ, ಅನೇಕ ಮನೆಗಳಿಗೆ ನೀರಿನ ವ್ಯವಸ್ಥೆ ಇರುವುದಿಲ್ಲ, ಲ್ಯಾಟ್ರಿನ್ಸ್ ಇರುವುದಿಲ್ಲ. ಖಾಸಗೀ ರಸ್ತೆಗಳಿರುತ್ತವೆ, ಅವು ರಿಪೇರಿಯಾಗಿರುವುದಿಲ್ಲ. ಮನೆಗಳ ದೊಡ್ಡ ದೊಡ್ಡ ರಿಪೇರಿಗಳನ್ನು ಲ್ಯಾಂಡ್ ಲಾರ್ಡ್ಸ್ ಮಾಡಬೇಕೆಂದು ಆಕ್ಟ್‌ನಲ್ಲಿ ಇದೆ, ಆದರೆ ಆ ಪ್ರಕಾರ ಮಾಡುತ್ತಿಲ್ಲ. ಈ ಆಕ್ಟ್ ಪ್ರಕಾರ ಟೆನೆಂಟ್ಸ್‌ಗೆ ದೊರೆಯಬೇಕಾದ ಅನುಕೂಲತೆಗಳು ಬಹಳ ಇವೆ. ಆದುದರಿಂದ ಲ್ಯಾಂಡ್ ಲಾರ್ಡ್ಸ್‌ಗ , ಕೂಡ ೨೦ ವರ್ಷದ ಹಿಂದೆ ಇದ್ದಂತಹ ಒಂದು ಬಾಡಿಗೆಯನ್ನೇ ಇವತ್ತೂ ತೆಗೆದು ಕೊಳ್ಳಬೇಕೆಂದು ಸರ್ಕಾರ ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಟೆನೆಂಟ್ಸ್ ಯಾವ ರೀತಿ ಸೌಕರ್ಯಗಳಿಗೆ ಅರ್ಹರಾಗಿದ್ದಾರೋ ಅದೇ ರೀತಿ ಮನೆಯ ಮಾಲೀಕರೂ ಕೂಡ ಹೆಚ್ಚಿನ ಒಂದು ಸೌಕರ್ಯಗಳನ್ನು ಒದಗಿಸಿ ಹೆಚ್ಚಿನ ಬಾಡಿಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿದೆ. ಒಟ್ಟಿನಲ್ಲಿ ಅದು ಯೋಗ್ಯವಾಗಿರಬೇಕು. ಇಂಥ ಅನೇಕ ತಿದ್ದುಪಡಿಗಳನ್ನು ತರುವುದಕೆ ಸರ್ಕಾರದ ಮುಂದೆ ಅನೇಕ ಬಾರಿ ಹೇಳಿದ್ದರೂ ಅದು ಇನ್ನೂ ಆಗಿಲ್ಲ. ಇದರಿಂದಾಗಿ ಈ ಆಕ್ಟ್ ಕೇವಲ ಬೆಂಗಳೂರು, ಹುಬ್ಬಳ್ಳಿಯಂತಹ ನಗರಗಳಿಗೆ ಮಾತ್ರವಲ್ಲ, ೧೦ ಸಾವಿರ ಜನಸಂಖ್ಯೆ ಇರುವ ಎಲ್ಲ ನಗರಗಳಿಗೂ ಅನ್ವಯಿಸುತ್ತದೆ. ಲ್ಯಾಂಡ್ ರಿಫಾರಮ್ಸ್ ಆಕ್ಟ್ ಕೆಳಗೆ ಲಿಟಿಗೇಷನ್ ಮುಂದುವರಿಯುತ್ತಿದೆ, ಟ್ರಿಬ್ಯುನಲ್ ಹೈಕೋರ್ಟ್ ಎಂದು ಒಂದು ಸಾರಿ ಲ್ಯಾಂಡ್ ಲಾರ್ಡ್ ಸಲ್ಲಿಸಿದ ಅರ್ಜಿ ತೀರ್ಮಾನವಾಗಬೇಕಾದರೆ ೧೫-೨೦ ವರ್ಷಗಳು ಹಿಡಿದಿದೆ. ಆ ರೀತಿ ಇಲ್ಲಿ ಆಗದೇ ಇರುವಂತೆ ಲ್ಯಾಂಡ್ ಲಾರ್ಡ್ ಸಲ್ಲಿಸಿದ ಅರ್ಜಿಯನ್ನು ಡಿಸ್ಪೋಸಲ್ ಮಾಡುವುದಕ್ಕೆ ಒಂದು ಕಾಲ ಮಿತಿಯನ್ನು ಗೊತ್ತುಪಡಿಸುವುದಕ್ಕೆ ತಿದ್ದುಪಡಿ ಯಾಗಬೇಕು. ಅದನ್ನು ನಾನು ಹಿಂದಿನ ಸಾರಿ ತಂದಿದ್ದೆ, ಆದರೆ ಈ ಸಾರಿ ತಂದಿಲ್ಲ. ಈಪೊತ್ತು ಲ್ಯಾಂಡ್‌ಲಾರ್ಡ್ಸ್ ಮತ್ತು ಟೆನೆಂಟ್ಸ್ ಇವರುಗಳ ಡಿಸ ಪ್ಯೂಟ್ ಏನು ಇದೆ, ಈ ಬಗ್ಗೆ ಮುನಿ ಸ್ಫ್ ಕೋರ್ಟ್‌ನಲ್ಲಿ ಏನು ಕೇಸಸ್‌ಗಳು ಇವೆ ಅವುಗಳನೆಲ್ಲಾ ೬ ತಿಂಗಳಿನಲ್ಲಿ ಮುಗಿಯಬೇಕು ಎಂದು ಒಂದು ಕಾಲಮಿತಿ ಹಾಕಬೇಕು. ಸಾಮಾನ್ಯವಾಗಿ ಈ ಬಗೆ ಒಂದು ಕೇಸು ಬಂದರೆ ಅದು ಕನಿಷ್ಟ ಪಕ್ಷ ಒಂದು ವರ್ಷದ ಒಳಗಾದರೂ ಮುಗಿಯುವ ವ್ಯವಸೆ ಇರಬೇಕು, ಇಲ್ಲದೇಹೋದರೆ ಬಹಳ ಕಷ್ಟ ವಾಗುತ್ತದೆ. ಈ ಲಿಟಿಗೇಷನ್ ಮುಂದುವರಿಸಿಕೊಂಡು ಹೋಗುತ್ತಾ ಇದ್ದರೆ ನ್ಯಾಯವಾಗಿರುವ ಜಿನಿಯನ್ ಲ್ಯಾಂಡ್ ಲಾರ್ಡ್ಸ್‌ಗೆ ಬಹಳ ಕಷ್ಟವಾಗುತ್ತದೆ. ಅವನಿಗೆ ಮನೆಯ ಅವಶ್ಯಕತೆ ಇದ್ದರೂ ಕೂಡ ಬಹಳ ತೊಂದರೆಗೆ ಒಳಗಾಗುತ್ತಾನೆ. ಈ ಬಗ್ಗೆ ನಾವು ದಿನನಿತ್ಯ ಕೊರ್ಟಿನಲ್ಲಿ ನೋಡುತ್ತಾ ಇದ್ದೇವೆ. ನಾನು ಒಬ್ಬ ವಕೀಲನಾಗಿರುವುದರಿಂದ ಈ ವಿಚಾರದಲ್ಲಿ ಸ ಲ್ಪ ಗೊತ್ತಿರುವುದರಿಂದ ಈ ಮಾತು ಹೇಳುತ್ತಿದ್ದೇನೆ. ಆದುದರಿಂದ ಇದಕ್ಕೆ ಕಾಲಮಿತಿ ಹಾಕತಕ ಂಥಾ ಒಂದು ತಿದ್ದುಪಡಿಯನ್ನು ತರಬೇಕಾದ ಆವಶ್ಯಕತೆ ಇದೆ. ಇವೆಲ್ಲವನ್ನೂ ತಾವು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಒಂದು ಸಮಗ್ರವಾದ ತಿದ್ದುಪಡಿಯನ್ನು ಈ ರೆಂಟ್ ಕಂಟ್ರೋಲ್ ಆಕ್ಟ್‌ನೊಳಗೆ ತರಬೇಕೆಂದು ನಾನು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶೀ ಟಿ. ಆರ್. ಶಾಮಣ್ಣ (ಬಸವನಗುಡಿ).—ಸನ್ಮಾನ್ಯ ಸಭಾಧ್ಯಕ್ಷರೇ, ಈಗ ನಮ್ಮ ಮುಂದೆ ಮಂಡಿಸಿರತಕ್ಕಂಥಾ ಕರ್ನಾಟಕ ರೆಂಟ್ ಕಂಟ್ರೋಲ್ (ಅಮೆಂಡ್‌ಮೆಂಟ್) ಬಿಲ್ ೧೯೭೨ ಇದನು ನಾನು ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ. ಇದಕೆ ಕಾರಣವಾದರೂ ಇಷ್ಟೆ. ಇಂಥಾ ಒಂದು ಕಾಯಿದೆ ಅವಶ್ಯಕತೆ ಇಲ್ಲ ಎನ್ನುವ ಬಗ್ಗೆ ನನಗೆ ವಿರೋಧ ಇಲ್ಲ. ಆದರೆ ಹಾಲಿ ಇರತಕ್ಕಂಥಾ ಬಿಲ್ಲಿನಲ್ಲಿ ಯಾವ ವಿಧವಾದಂಥಾ ಅನುಕೂಲತೆಗಳೂ ಕೂಡ ಮನೆಯ ಬಾಡಿಗೆಯ ಇರತಕ್ಕಂಥಾ ಬಾಡಿಗೆದಾರರಿಗಾಗಲಿ ಅಥವಾ ಮನೆಯ ಮಾಲೀಕನಿಗಾಗಲಿ ಇಲ್ಲದೇ ಇರತಕ್ಕಂಥಾದ್ದು ಬಹಳ ಶೋಚನೀಯ, ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದುವರೆಗೂ ಕೂಡ ನಾನು ನೋಡಿರತಕ್ಕಂಥಾದ್ದು ಯಾರಿಗೆ ಮನೆ ಅವಶ್ಯಕತೆ ಇದೆ ಅಂಥಾವರಿಗೆ ರೆಂಟ್ ಕಂಟ್ರೋಲ್‌ನಿಂದ ಅಲಾಟ್ ಆಗಿಲ್ಲ. ರೆಂಟ್ ಕಂಟ್ರೋಲ್‌ನಿಂದ ಮನೆಗಳು ಅಲಾಟ್ ಆಗಬೇಕಾದರೆ ಮೊದಲನೆಯದಾಗಿ ದುಡ್ಡು ಖರ್ಚು ಮಾಡಿದರೆ ಮನೆಗಳು ಸಿಕ್ಕುತ್ತದೆ. ಎರಡನೆಯದಾಗಿ ಆಫೀಸರ್ಸ್ ಯಾರಾದರೂ ಇನ್‌ಫ್ಲೂಯೆನ್ಸ್ ಮಾಡಿದರೆ ಅಂಥವರಿಗೆ ಸಿಕ್ಕುತ್ತದೆ, ಮೂರನೆಯದಾಗಿ ಸರ್ಕಾರದ ಮೇಲೆ ಪ್ರಭಾವ ಉಪಯೋಗಿಸಿ ಅವರಿಗೆ ಯಾರಿಗೆ ಡೈರಕ್ಷನ್ಸ್ ಕೊಡುತ್ತಾರೋ ಅಂಥಾವರಿಗೆ ಸಿಕ್ಕುತ್ತದೆ. ಇಲ್ಲದೇ ಹೋದರೆ ರೆಂಟ್ ಕಂಟ್ರೋಲ್‌ನಿಂದ ವರ್ಷಗಟ್ಟಲೆಯಾದರೂ ಸಿಕ್ಕವುದಿಲ್ಲ. ಇದು ಬಹಳ ಶೋಚನೀಯವಾದ ವಿಚಾರ. ನಾನು ಈ ಬಗ್ಗೆ ಅನೇಕ ಸಾರಿ ಹೇಳಿದ್ದೇನೆ. ಕಳೆದ ಬಾರಿ ಇಂಥಾದ್ದೇ ಒಂದು ಅಮೆಂಡ್‌ಮೆಂಟ್ ತಂದಾಗ ಈ ಬಗ್ಗೆ ಒಂದು ಸಮಗ್ರವಾದ ಮಸೂದೆಯನ್ನು ತೆಗೆದುಕೊಂಡು ಬನ್ನಿ, ನ್ಯಾಯವಾದಂಥಾ ಒಂದು ಮಸೂದೆಯನ್ನು ತೆಗೆದುಕೊಂಡು ಬನ್ನಿ ಅಂತ ಹೇಳಿದೆ. ಅದಕ್ಕೆ ಅವರು ಏನು ಹೇಳಿದರು ಎಂದರೆ ಈ ಸಾರಿ

ಇದನ್ನು ಪಾಸ್ ಮಾಡಿಬಿಡಿ ಮುಂದಿನ ಸಾರಿ ತರುತ್ತೇವೆ ಎಂದು ಹೇಳಿದರು ಹಿಂದೆ ಇದ್ದಂಥಾ ಮಂತ್ರಿಗಳು ಈ ಬಗ್ಗೆ ಒಂದೊಂದು ವರ್ಷಕ್ಕೆ ಎಕ್ಸ್‌ಟೆನ್‌ಷನ್ ಕೇಳುತ್ತಿದ್ದರು. ಆದರೆ ಈಗ ಇರತಕ್ಕಂಥಾ ಮಂತ್ರಿಗಳು ಈ ಬಗ್ಗೆ ಒಂದೇ ಸಾರಿ ೫ ವರ್ಷಕ್ಕೆ ಎಕ್ಸ್‌ಟೆನ್‌ಷನ್ ಕೇಳಿದ್ದಾರೆ ಅಂದರೆ ೧೯೮೨ರ ವರೆಗೂ ಕೇಳಿದ್ದಾರೆ. ಆದುದರಿಂದ ನಾನು ಹೀಗೆ ತರುವ ಬದಲು ಇದಕ್ಕೆ ಒಂದೇ ಸಾರಿ ಎಲ್ಲಾ ಅಂಶಗಳನ್ನೂ ಒಳಗೊಂಡು ಒಂದು ಸಮಗ್ರವಾದ ಮಸೂದೆಯನ್ನು ತರಬೇಕು ಎಂದು ಹೇಳುತ್ತೇನೆ. ಏತಕೆ ಂದರೆ ರೆಂಟ್ ಕಂಟ್ರೋಲ್ ಆಕ್ಟ್ ಪ್ರಕಾರ ಮನೆ ಯಾರಿಗಾದರೂ ದೊರೆಯಬೇಕಾದರೆ ಮೊದಲ ಆದ್ಯತೆ ಮನೆ ಮಾಲೀಕನಿಗೆ ಅವಶ್ಯಕವಾಗಿ ಬೇಕಾಗಿದ್ದರೆ ಜಿನಿಯನ್ ಕೇಸ್ ಅಂಥಾದ್ದು ಇದ್ದರೆ, ಅವರಿಗೆ ಕೊಡಬೇಕು, ಎರಡನೇ ಆದ್ಯತೆ ರಾಜ್ಯ ಸರ್ಕಾರದ ನೌಕರರಿಗೆ ಕೊಡಬೇಕು, ಹಾಗೆಯೇ ಮೂರನೇ ಆದ್ಯತೆ ಕೇಂದ್ರ ಸರ್ಕಾರದ ನೌಕರರಿಗೆ ಕೊಡಬೇಕು. ಈಗ ಇವರಿಗ್ಯಾರಿಗೂ ಸಿಕ್ಕುತ್ತಾ ಇಲ್ಲ. ಯಾರು ಸರ್ಕಾರದ ಮೇಲೆ ಪ್ರಭಾವ ಬೀರುತ್ತಾರೋ, ಅವರಿಂದ ಯಾರಿಗೆ ಡೈರಕ್ಷನ್ ಹೋಗುತ್ತದೋ ಅಂಥವರಿಗೆ ಸಿಕ್ಕುತ್ತದೆ. ಅವನು ಅರ್ಜನಾದಂಥ ವ್ಯಕ್ತಿ ಆಗಿರಲಿ, ಆಗಿಲ್ಲದೇ ಇರಲಿ ಅವರಿಗೆ ಕೊಟ್ಟು ಬಿಡುತ್ತಾರೆ. ಆದುದರಿಂದ ಈಗಿರುವ ಕಾಯಿದೆ ನಿಜವಾಗಿಯೂ ಕೂಡ ಮನೆ ಮಾಲೀಕರಿಗೆ ಆಗಲಿ ಅಥವಾ ಟೆನೆಂಟ್‌ಗಾಗಲಿ ಸಹಾಯವಾಗುತ್ತಾ ಇಲ್ಲ. ನಗರದಲ್ಲಿರುವ ಮನೆ ಮಾಲೀಕರಿಗೆ ಸಹಾಯವಾಗ ಬೇಕಾದರೆ ಒಂದು ಕಡೆ ಟೆನೆಂಟ್‌ನಿಂದ ಆಗತಕ್ಕಂಥ ತೊಂದರೆಯನ್ನು ತಪ್ಪಿಸಬೇಕು ಮತ್ತೊಂದು ಕಡೆ ಈ ರೆಂಟ್ ಕಂಟ್ರೋಲ್ ಆಕ್ಟ್‌ನಲ್ಲಿರುವ ಕೆಲವು ನಿಬಂಧನೆಗಳನ್ನು ತೆಗೆದರೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಈಗ ಏನಾಗಿದೆ ಎಂದರೆ ಒಂದು ಕಡೆ ಮಾಲೀಕರು ತಮ್ಮ ಮನೆ ಬಾಡಿಗೆಯನ್ನು ಹೆಚ್ಚಿಸುವುದಕ್ಕೆ ಟೆನೆಂಟ್‌ಗೆ ಕಿರುಕುಳ ಕೊಡುತ್ತಾರೆ, ಏನು ಮಾಡುತ್ತಾರೆ ಎಂದರೆ ಲೈಟ್ ಡಿಸ್‌ಕನೆಕ್ಷನ್ ಮಾಡಿಸುವುದು, ನೀರಿನ ವೋಟರ್ ಅನ್ನು ಡಿಸ್ ಕನೆಕ್ಷನ್ ಮಾಡಿಸುವುದು, ಮನೆ ಹೆಂಚುಗಳನ್ನು ತೆಗೆಸಿ ಹಾಕುವುದು ಈ ರೀತಿಯ ನಾನಾ ತೊಂದರೆಗಳನ್ನು ಮಾಲೀಕದಾರನು ಬಾಡಿಗೆಯಲ್ಲಿರತಕ್ಕಂಥಾ ವನಿಗೆ ಕೊಡುತ್ತಾರೆ. ತಮಗೆ ಉದಾಹರಣೆ ಹೇಳಬೇಕಾದರೆ ನನಗೆ ೪-೫ ಮನೆಗಳು ಇವೆ. ನನಗೆ ೧೨೦೦ ರೂಪಾಯಿ ಬಾಡಿಗೆ ಬರುತ್ತಾ ಇತ್ತು ಈಗ ೧೮೦೦ ರೂಪಾಯಿ ಬಾಡಿಗೆ ಬರುತ್ತಾ ಇದೆ. ಅವರೇ ಜಾಸ್ತಿ ಮಾಡಿರುತ್ತಾರೆ. ಕೆಲವು ಮಾಲೀಕರು ಮನೆಯನ್ನು ಬಿಡಿಸಿದರೆ ೧೫೦ ರೂಪಾಯಿ ಇದ್ದುದು ೨೦೦ ರೂಪಾಯಿ ಬಾಡಿಗೆ ಬರುತ್ತದೆ ಎಂದು ಯಾವುದಾದರೂ ವಿಧದಿಂದ ಅದು ಕ್ರಮವಾಗಿ ಇರಲಿ ಇಲ್ಲದೇ ಇರಲಿ ಬಾಡಿಗೆದಾರರಿಗೆ ಕಿರುಕುಳ ಕೊಡುತ್ತಾ ಇರುವುದನ್ನು ನಾನು ನೋಡುತ್ತಾ ಇದ್ದೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಸಾರಿ ನಾವು ಹೋದಾಗ ಬಾಡಿಗೆ ವಿಚಾರದಲ್ಲಿ ಕಂದಾಯವನ್ನು ಹೆಚ್ಚಿಸುವ ವಿಚಾರದಲ್ಲಿ ಅವರೊಂದಿಗೆ ಮಾತನಾಡಿದಾಗ ಅವರು ನಮ್ಮ ಮನವಿಯನ್ನು ಸಹಾನುಭೂತಿಯಿಂದ ಕೇಳಿದರು. ತಮಗೆ ಹೇಳಬೇಕಾದರೆ ಕೆಲವು ಮನೆಗಳು ಯಾವುದೋ ಕಾಲದಲ್ಲಿ ಕಟ್ಟಿ ಬಾಡಿಗೆಗೆ ಕೊಟ್ಟಿರುತ್ತಾರೆ ಅಂಥಾ ಸ್ವಲ್ಪ ಸ್ವಲ್ಪ ಬಾಡಿಗೆಯನ್ನು ಹೆಚ್ಚಿಸಿದರೆ ಮನೆ ಮಾಲೀಕನಿಗೂ ಸಹ ಸಹಾಯವಾಗುವುದಲ್ಲದೆ ಕಾರ್ಪೋರೇಷನ್ ಕಂದಾಯಕ್ಕೂ ಕೂಡ ಸ್ವಲ್ಪ ಅನುಕೂಲವಾಗುತ್ತದೆ ಎಂದು ನಾವು ಮುಖ್ಯಮಂತ್ರಿಗಳಲ್ಲಿ ಹೇಳಿದಾಗ ಅವರು ಒಂದು ನೋಟನ್ನು ಬರೆದು ಕಳುಹಿಸಿಕೊಟ್ಟರು. ಸಾಧ್ಯವಾದಷ್ಟು ಕೂಡ ಹಳೇ ಮನೆಗಳಿಗೆ ಸ್ವಲ್ಪ ರೆಂಟ್‌ನ್ನು ಹೆಚ್ಚಿಸಬೇಕು ಎಂದು ಅವರು ಆದೇಶ ಕೊಟ್ಟರು. ಆದರೆ ಆ ಆದೇಶದ ಪ್ರತಿಫಲ ಇದುವರೆಗೂ ಬಾರದೇ ಇರತಕ್ಕಂಥಾದ್ದು ಬಹಳ ಶೋಚನೀಯ. ಇದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ನಗರದಲ್ಲಿ ಮನೆ ಅಭಾವದ ಬಗ್ಗೆ ಹೇಳುವುದಾದರೆ ದಿನೇ ದಿನೇ ಮನೆಗಳ ಅಭಾವ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ಇದಕ್ಕೆ ಇಂಗ್ಲಿಷ್‌ನಲ್ಲಿ ಒಂದು ಗಾದೆ ಇದೆ ಅದೇನೆಂದರೆ Fools build Houses wise men live in them ಎಂದು. ಅನೇಕ ಸಂದರ್ಭಗಳಲ್ಲಿ ಈ ಬಗ್ಗೆ ತೊಡಕುಗಳು ತೊಂದರೆಗಳು ಆಗಿವೆ. ಇದರಿಂದ ಬಾಡಿಗೆಗೆ ಮನೆಗಳನ್ನು ಈಗ ಕೊಡುವುದೇ ಕಷ್ಟವಾಗಿದೆ. ಈಗ ಯಾವ ಮನೆಗಳನ್ನು ಕಟ್ಟಬೇಕಾದರೂ ಕೂಡ ಒಂದು ಚದರ ಗಜಕ್ಕೆ ೫ ಸಾವಿರ ರೂಪಾಯಿಗಿಂತ ಕಡಿಮೆಯಾಗುವುದಿಲ್ಲ. ಆದುದರಿಂದ ಮನೆಗಳನು ಕಟ್ಟುವವರ ಸಂಖ್ಯೆ ಕಡಿಮೆಯಾಗಿದೆ ಅಲ್ಲದೆ ಇರುವವರೂ ಬಾಡಿಗೆಯನ್ನು ಹೆಚ್ಚು ಮಾಡುವುದಕ್ಕೆ ಅವಕಾಶವಾಗಿದೆ. ಇದರ ಬಗ್ಗೆ ಯೋಚನೆ ಮಾಡಿ ಟೆನೆಂಟ್ಸ್ ಮತ್ತು ಲ್ಯಾಂಡ್ ಲಾರ್ಡ್ಸ್ ಇಬ್ಬರಿಗೂ ತೊಂದರೆ ಆಗದೇ ಇದ್ದ ಹಾಗೆ ಇವರನ್ನು ಪೇಚಾಟಕ್ಕೆ ಸಿಕ್ಕಿಸದೇ ಇದ್ದ ಹಾಗೆ ಯಾವುದಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ವಿಚಾರದಲ್ಲಿ ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ.

ನಮ್ಮದೊಂದು ಕಾಮರ್ಸ್ ಇನ್ಸ್‌ಟ್ಯೂಟ್ ಅಸ್ಸೋಸಿಯೇಷನ್ ಇದೆ. ಅದು ರಿಜಿಸ್ಟರ್ಡ್ ಆಗಿದೆ ಅದಕ್ಕೆ ೧ ಲಕ್ಷ ೩೦ ಸಾವಿರ ರೂಪಾಯಿ ಕೊಟ್ಟು ತೆಗೆದುಕೊಂಡಿದ್ದೇವೆ. ಅದನ್ನು ಬಾಡಿಗೆಗೆ ಕೊಟ್ಟಿರ ತಕ್ಕಂಥಾದ್ದು ೧೭೫ ರೂಪಾಯಿಗೆ ಮಾತ್ರ. ಇದರಿಂದ ಏನು ಲಾಭ ಬರುತ್ತದೆ ನೋಡಿ. ಇದೇ ದುಡ್ಡನ್ನು ಬ್ಯಾಂಕ್‌ನಲ್ಲಿ ಇಟ್ಟಿದ್ದರೆ ನಮಗೆ ೧೦ ಸಾವಿರ ರೂಪಾಯಿ ಮೇಲೆ ಬಡ್ಡಿ ಬರುತ್ತಿತ್ತು. ಹೋದ ವರ್ಷ ರೆಂಟ ಕಂಟ್ರೋಲ್‌ಗೆ ಎಲ್ಲವನ್ನೂ ಹಿಡಿತದಲ್ಲಿಟ್ಟುಕೊಳ್ಳಲು ಎಲ್ಲರೂ ಡಿಕ್ಲರೇಷನ್ ಕೊಡಬೇಕು ಎಂದು ಆದೇಶ ಕೊಟ್ಟರು. ಆದರಂತೆ ಸುಮಾರು ೧೦ ಸಾವಿರ ಜನರು ಡಿಕ್ಲರೇಷನ್ ಕೊಟ್ಟರು. ಡಿಕ್ಲರೇಷನ್ ಅನ್ನು ಮನೆ ಮಾಲೀಕರೂ ಕೊಟ್ಟರು, ಬಾಡಿಗೆದಾರರೂ ಕೊಟ್ಟರು. ಆದರೆ ಇದುವರೆಗೂ ಕೂಡ ಆ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡರು ಅನ್ನುವುದು ನಮಗೆ ಗೊತ್ತಾಗಲಿಲ್ಲ. ಇದರ ಬಗ್ಗೆ ಒಂದು ಆಶ್ವಾಸನೆ ಕೊಟ್ಟಿದ್ದರೂ ಕ್ಷಡ ಏನೂ ಆಗಿಲ್ಲ. ಇಷ್ಟೇ ಅಲ್ಲದೆ ಈಗ ಹೌಸಿಂಗ್ ಬೋರ್ಡ್‌ನವರು ಮತ್ತು ಬಿ.ಡಿ.ಎ. ಅವರು ಹೊಸದಾಗಿ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಮಾನ್ಯ ಅಧ್ಯಕ್ಷರು ಹೌಸಿಂಗ್ ಬೋರ್ಡ್ ಛೇರ್ಮನ್ ಆಗಿದ್ದವರು. ಅವರಿಗೆ ಇದೆಲ್ಲಾ ಗೊತ್ತು. ಮೊದಲು ಹೌಸಿಂಗ್ ಬೋರ್ಡ್‌ನವರು ಮನೆ ಕಟ್ಟಿದಾಗ ಅದಕ್ಕೆ ಬೆಲೆ ೪೫ ಸಾವಿರ ರೂಪಾಯಿ ಆಗುತ್ತದೆ ಎಂದು ಬೆಲೆ ಕಟ್ಟಿ ಅಪ್ಲಿಕೇಷನ್ ಕಾಲ್ ಫಾರ್ ಮಾಡಿ ಕೆಲವರಿಗೆ ಅಲಾಟ್ ಮಾಡಿದರು. ಕೊನೆ ಕೊನೆಗೆ ಏನಾಯಿತು ಎಂದರೆ ಆ ಮನೆಗಳನ್ನು ಕಟ್ಟಿದ ಮೇಲೆ ಅದರ ಒಟ್ಟು ಅಂದಾಜು ೮೨ ಸಾವಿರ ರೂಪಾಯಿ ಆಗುತ್ತದೆ ಅದನ್ನು ಕೊಡಬೇಕು. ಅಲಾಟ್ ಆದವರಿಗೆ ನೋಟೀಸ್ ಹೋಯಿತು. ಈ ರೀತಿಯಾಗಿ ಒಂದಕ್ಕೆ ಎರಡರಷ್ಟು ಹೆಚ್ಚಿಸಿಬಿಟ್ಟರೆ ಅವರು ದುಡ್ಡು ಎಲ್ಲಿಂದ ತರಬೇಕು, ಎಷ್ಟು ಕಷ್ಟವಾಗುತ್ತದೆ ಅನ್ನುವುದನ್ನು ಯೋಚನೆ ಮಾಡಬೇಕು. ಇವರಿಬ್ಬರೂ ಸೇರಿ ಮನೆಗಳನ್ನು ಕಟ್ಟಿಸಿದರೆ ನಗರದ ನಾಗರೀಕರಿಗೆ ಇರತಕ್ಕಂಥಾ ಮನೆಗಳ ಅಭಾವ ಕಡಿಮೆಯಾಗುತ್ತದೆ ಅನ್ನುವುದೇನೋ ನಿಜ ಆದರೆ ಅದು ದುಬಾರಿಯಾದರೆ ಬಹಳ ಕಷ್ಟ. ಈ ಬಗ್ಗೆ ಸಾಧ್ಯವಾದಷ್ಟು ಅವರಿಗೆ ಅನುಕೂಲಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಬೆಂಗಳೂರು ನಗರದಲ್ಲಿ ಎಷ್ಟು ಕಷ್ಟ ಇದೆ ಅನ್ನುವುದನ್ನು ನಾವು ನೋಡತ್ತಾ ಇದ್ದೇವೆ. ಬಾಡಿಗೆಗೆ ಮನೆ ಸಿಗಬೇಕಾದರೆ ಕೆಲವು ಕಡೆ ಪಗಡಿ ಕೊಡಬೇಕು, ಬಡ್ಡಿ ಇಲ್ಲದೆ ಅಡ್ವಾನ್ಸ್ ಮಾಡಬೇಕು. ಜೊತೆಗೆ ಮನೆ ಬಾಡಿಗೆಯೂ ಕೂಡ ಬಹಳ ದುಬಾರಿ ಆದುದರಿಂದ ಸರ್ಕಾರದವರು ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಹೌಸಿಂಗ್‌ಬೋರ್ಡ್ ಮುಖಾಂತರವಾಗಲಿ, ಬಿ.ಡಿ.ಎ. ಮುಖಾಂತರವಾಗಲಿ ಅಥವಾ ಕೋ ಆಪರೇಟೀವ್ ಸೊಸೈಟಿ ಮುಖಾಂತರವಾಗಲಿ ಮನೆಗಳನ್ನು ಕಟ್ಟಿಸಿಕೊಡುವ ಏರ್ಪಾಡು ಮಾಡಿದರೆ ಈ ಮನೆಯ ಅಭಾವ ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ ಎಂದು ನನಗೆ ಅನಿಸುತ್ತದೆ. ಈ ವಿಚಾರದಲ್ಲಿ ಇನ್ನೊಂದು ಮಾತು ಹೇಳುವುದಾದರೆ ಕಳೆದ ೪-೫ ವರ್ಷದಿಂದ ಈಚೆಗೆ ಬಿ.ಡಿ.ಎ. ಅವರು ೨೦-೨೫ ಸಾವಿರ ಸೈಟುಗಳನ್ನು ಕೊಟ್ಟಿದ್ದಾರೆ ಎಂದು ಕೇಳಿದ್ದೇನೆ. ಈಗ ಇರತಕ್ಕಂಥಾ ಪರಿಸ್ಥಿತಿಯಲ್ಲಿ ಯಾರೂ ಕೂಡ ಮನೆ ಕಟ್ಟುವುದಕ್ಕೆ ಆಗಲಿ ತೊಂದರೆಯಾಗುತ್ತದೆ. ತಾವು ಇದನ್ನು ಯೋಚನೆ ಮಾಡಬೇಕು. ನಾನು ಮೊದಲೇ ಹೇಳಿದ ಹಾಗೆ ಮನೆಗಳನ್ನು ಕಟ್ಟುವುದಕ್ಕೆ ದುಬಾರಿ ವೆಚ್ಚವಾಗುವುದೂ ಅಲ್ಲದೆ ಅವನು ಮನೆಯನ್ನು ಬಾಡಿಗೆಗೆ ಕೊಟ್ಟರೂ ಸಹ ೪-೫ ಪರ್ಸೆಂಟ್‌ಗಿಂತ ಹೆಚ್ಚಿಗೆ ಬಡ್ಡಿ ಸಿಕ್ಕುವುದಿಲ್ಲ. ಆದುದರಿಂದ ಸರ್ಕಾರದವರು ಈ ಬಗ್ಗೆ ಯೋಚನೆ ಮಾಡತಕ್ಕ ಕಾರ್ಯಕ್ರಮ ತೆಗೆದುಕೊಂಡರೆ ಮನೆ ಅಭಾವ ಇರುವುದನ್ನು ತಪ್ಪಿಸಬಹುದು. ಅಲ್ಲದೆ ಯಾರು ಮನೆ ಬಾಡಿಗೆಯನ್ನು ಹೆಚ್ಚು ಮಾಡುತ್ತಾರೋ ಇದರಿಂದ ಅದನ್ನು ತಪ್ಪಿಸುವುದಕ್ಕೆ ಸಾಧ್ಯವೂ ಇದೆ. ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಯಾವನಾದರೂ ಮನೆ ಕಟ್ಟಿದರೆ ಸಾಧಾರಣವಾಗಿ ೫ ಪರ್ಸೆಂಟಿಗಿಂತ ಹೆಚ್ಚು ಬಡ್ಡಿ ಬರುವುದಿಲ್ಲ. ಇವೊತ್ತು ಬೆಂಗಳೂರು ನಗರದಲ್ಲಿ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಮನೆ ಕಟ್ಟಿಸಿ ಬಾಡಿಗೆ ಕೊಡುವ ಬದಲು ಬ್ಯಾಂಕಿನಲ್ಲಿ ಹಣ ಇಟ್ಟರೆ ೧೦-೧೫ ಪರ್‌ಸೆಂಟ್‌ವರೆಗೆ ಬಡ್ಡಿ ಸಿಕ್ಕುತ್ತದೆ ಎನ್ನುವ ಯೋಚನೆ ಮನೆ ಕಟ್ಟಿಸತಕ್ಕಂತಹವರಿಗೆ ಬಂದಿದೆ. ಬಾಡಿಗೆಗೆ ಮನೆ ಕೊಡುವುದು ಬಹಳ ಕಡಿಮೆಯಾಗಿದೆ. ಅನೇಕ ಜನರಿಗೆ ಮನೆಗಳು ಬಾಡಿಗೆಗೆ ಸಿಕ್ಕದೆ ಪರದಾಡುವಂಥ ಪರಿಸ್ಥಿತಿ ಬಂದಿದೆ. ೩೦-೪೦ ರೂಪಾಯಿಗಳ ಒಂದು ರೂಮಿನಲ್ಲಿ ಸಂಸಾರ ನಡೆಸಿಕೊಂಡು ಹೋಗತಕ್ಕ ಪರಿಸ್ಥಿತಿ ಬಂದಿದೆ. ಬೆಂಗಳೂರು ನಗರದಲ್ಲಿ ಮನೆಗಳಿಗೆ ಇರತಕ್ಕ ಅಭಾವವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ತಮ್ಮಲ್ಲಿ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಮನೆ ಕಟ್ಟಿಡ ಹೊಂದಿರತಕ್ಕವರು ಯದ್ವಾತದ್ವಾ ಬಾಡಿಗೆ ಹೇಳತಕ್ಕದ್ದನ್ನು ಕಡಿಮೆ ಮಾಡಂಥವಂತೆ ಮಾಡಬೇಕು. ಹಾಗೆ ಮನೆ ಕಟ್ಟಿಡ ಹೊಂದಿರತಕ್ಕವನಿಗೆ ತೊಂದರೆಯಾಗದಂತೆ ಅವನಿಗೂ ಕೂಡ ಅನುಕೂಲವಾಗುವ ರೀತಿಯಲ್ಲಿ ಅವಕಾಶ ಮಾಡಿ ಕೊಡಬೇಕು. ಇದಕ್ಕೆ ಸಂಬಂಧಪಟ್ಟಂತೆ

ಒಂದು ಮಸೂದೆಯನ್ನು ತಂದರೆ ಬಹಳ ಅನುಕೂಲವಾಗುತ್ತದೆ, ಅದನ್ನು ಬಿಟ್ಟು ಪದೇ ಪದೇ ಇದನ್ನು ಮುಂದಕ್ಕೆ ಹಾಕಿಕೊಂಡು ಹೋಗುತ್ತಾ ಇದ್ದರೆ ಇದರಿಂದ ಬಹಳ ಅನಾನುಕೂಲವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಉತ್ತಮವಾದಂಥ ಮಸೂದೆಯನ್ನು ಶೀಘ್ರವಾಗಿ ತರುತ್ತೀರೆಂದು ನನಗೆ ನಂಬಿಕೆ ಇದೆ. ದಯವಿಟ್ಟು ಇದನ್ನು ೫ ವರ್ಷಗಳ ಕಾಲ ಮುಂದಕ್ಕೆ ಹಾಕಬೇಡಿ. ಇದನ್ನು ವಿರೋಧಿಸಿ ನಾನು ಇದಕ್ಕೆ ಒಂದು ಅಮೆಂಡ್‌ಮೆಂಟ್ ಕೂಡ ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ಒಂದು ಕೆಲಸ ಹಿಡಿದರೆ ಬೇಗ ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಒಂದು ವರ್ಷದಲ್ಲೇ ಸಮಗ್ರವಾದಂಥ ತಿದ್ದುಪಡಿಯನ್ನು ತರಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಆಸಕ್ತಿ ವಹಿಸಿದ್ದಾರೆ. ಇವೊತ್ತು ಟ್ಯಾಕ್ಸೇಷನ್ ವಿಚಾರ ಹೇಳಬೇಕು ಎಂದರೆ, ಒಬ್ಬ ಮನೆ ಕಟ್ಟಡ ಕಟ್ಟಿಸಿ ಬಾಡಿಗೆ ಕೊಟ್ಟರೆ ಅವನು ಎರಡು ತಿಂಗಳು ಬಾಡಿಗೆ ಟ್ಯಾಕ್ಸ್ ಕೊಡಬೇಕಾಗುತ್ತದೆ, ಅವನು ಏನಾದರೂ ಸಾಲ ಮಾಡಿ ಮನೆ ಕಟ್ಟಿದ್ದರೆ ಅವನು ಬದುಕುವುದೇ ಕಷ್ಟವಾಗುತ್ತದೆ. ಮತ್ತೆ ತಾವು ಏನಾದರೂ ೫ ರೂಪಾಯಿ ಕಂದಾಯ ಜಾಸ್ತಿ ಮಾಡಿದರೆ ಮನೆಯವನ್ನು ೫೦ ರೂಪಾಯಿ ಬಾಡಿಗೆ ಹೆಚ್ಚಿಸುತ್ತಾನೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮನೆ ಕಟ್ಟಿಸಿ ಬಾಡಿಗೆ ಕೊಟ್ಟಿರತಕ್ಕವರಿಗೆ ಟ್ಯಾಕ್ಸ್ ಹಾಕುವುದರಿಂದ ಏನು ತೊಂದರೆಯಾಗುವುದಿಲ್ಲ. ಆದರೆ ಅಲ್ಪ ಸ್ವಲ್ಪ ಮನೆ ಕಟ್ಟಿಸಿ ಬಾಡಿಗೆ ಕೊಟ್ಟಿರತಕ್ಕಂತಹವರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಶೀಘ್ರವಾಗಿ ಒಂದು ಸಮಗ್ರವಾದಂಥ ನ್ಯಾಯವಾದಂಥ ಮಸೂದೆಯನ್ನು ತರಬೇಕು ಎಂದು ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಮಾನ್ಯ ಶಾಮಣ್ಣನವರು ಹೇಳುವ ವಿಚಾರ ಏನು ಇದೆ ಎಂದರೆ ಸಮಗ್ರವಾದಂಥ ತಿದ್ದುಪಡಿ ತರಬೇಕು ಎಂದು ಹೇಳಿದ್ದಾರೆ. ಆದ್ದರಿಂದ ಆದಷ್ಟು ಬೇಗ ಈ ಸೆಷನ್‌ನಲ್ಲಿಯೇ ತರಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಈ ಆರ್ಡಿನೆನ್ಸ್ ಹೊರಡಿಸಿದ್ದು ೧೯೭೭ನೇ ಇಸವಿಗೆ ಇದು ಕೊನೆ ಆಗುತ್ತಿತ್ತು. ಆದ್ದರಿಂದ ಇದನ್ನು ಮತ್ತೆ ೫ ವರ್ಷ ಮುಂದುವರಿಸಲೇ ಬೇಕಾಗಿದೆ. ಇದನ್ನು ಮುಂದುವರೆಸುವುದರಿಂದ ಯಾವುದೇ ರೀತಿಯಲ್ಲಿ ತೊಂದರೆ ಏನು ಆಗುವುದಿಲ್ಲ. ತಿದ್ದುಪಡಿಯನ್ನು ತರಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಅದನ್ನು ಈ ಸದನದಲ್ಲೇ ತರುತ್ತೇವೆ.

SRI D. DEVARAJ URS.—This is merely to extend the existing Act, which would have otherwise lapsed by the end of December.I think the apprehension of the hon'ble members is that by extending the life of this Act the Government is not interested in bringing in amendments in the light of what has been stated earlier and also the experience we have gained while implementing the existing Act. I think I made a mistake in not assuring the House that already there are many amendments on the anvil. They are being processed. The ordinance issued will have to be replaced by an Act and that is why this Bill is brought before the House. I fully agree and endorse the dire need for bringing in amendments to the Act in the light of the experience gained in working the existing Act. We will do that. I am assure that we are also experiencing the difficulties as enumerated by Sri Shamanna who has a lot of expereince of Bangalore Corporation.

SRI M. C. BASAPPA.—In that case you could have accepted the amendment moved by the hon'ble member Sri Shamanna.

SRI D. DEVARAJ URS.—The hon'ble member wants it to be extended for one year. Whether it is one year or two years or whatever it is, we want the Act to continue. It is not as if after one year there is no need for the Act to continue.

SRI M. C. BASAPPA.—It is only to see that Government will think of the urgency.

Sri D. DEVARAJ URS.— The amendments are on the anvil. If you are under the impression that by moving this amendment for one year we are not going to bring the amendments, it is not correct.

ಒಬ್ಬ ಸದಸ್ಯರು.—ಮಾನ್ಯ ಮಂತ್ರಿಗಳು ಅಮೆಂಡ್‌ಮೆಂಟ್ ತರುವುದಕ್ಕೆ ಮುಂಚೆ ನಮ್ಮೆಲ್ಲರ ಅಭಿಪ್ರಾಯಗಳನ್ನು ತಿಳಿದುಕೊಂಡು ತಂದರೆ ಒಳ್ಳೆಯದು ಅಲ್ಲವೇ ?

SRI D. DEVARAJ URS.—When the Bill is brought before the House it is for the House to make suggestions, move amendments etc. It is not as if that now only you can suggest what is wrong and what is right. When a Bill is before the House if the members so desire it can go to a select committee or amendments can be brought. We are not rigid. It is not as if Government alone knows so many things. Hon'ble Members also know.

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೆ, ಸರ್ಕಾರದವರು ಸಮಾಜವಾದಕ್ಕೆ ಬಹಳ ಬದ್ಧರಾಗಿದ್ದಾರೆಯೇ ಎಂದು ಕೆಲವರಲ್ಲಿ ಸಂಶಯ ಇದೆ. ಇದ್ದಪರಿಗೆ ಮನೆ ಕೊಡಿಸಿ ಕೊಡುವ ಕಾನೂನು ಏನಾದರೂ ತರುತ್ತಾರೆಯೇ ಎನ್ನುವುದು ಕೆಲವರಲ್ಲಿ ಇದೆ. ಹಾಗೆ ಏನಾದರೂ ಮಾಡುವುದು ಇದ್ದರೆ ಮಾನ್ಯ ಮಂತ್ರಿಗಳು ತಿಳಿಸಬೇಕು ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮ ಸಮಾಜವಾದ ನಾನು ಹೇಳುತ್ತೇನೆ ಸ್ವಲ್ಪ ನಿಧಾನ ಮಾಡಿ.

ಒಬ್ಬ ಸದಸ್ಯರು.—ಮಾನ್ಯ ಮಂತ್ರಿಗಳು ಇದನ್ನು ಎಷ್ಟು ಸಮಯದಲ್ಲಿ ತರುತ್ತೀರಾ ಎಂದು ತಿಳಿಸಲಿಕ್ಕೆ ಸಾಧ್ಯವೇ ?

ಶ್ರೀ ಡಿ. ದೇವರಾಜ್ ಅರಸ್.—ಈ ಸೆಷನ್ ನಡೆಯುವುದರೊಳಗೆ ತರುತ್ತೇವೆ.

ಶ್ರೀ ಎಸ್. ಎಸ್. ಅರಿಕೇರಿ (ಬಳ್ಳೊಳ್ಳಿ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಈ ಬಗ್ಗೆ ಒಂದು ಸಮಗ್ರವಾದ ಮಸೂದೆಯನ್ನು ತರುವ ಆಶ್ವಾಸನೆಯನ್ನು ಕೊಟ್ಟಿರುವುದರಿಂದ ಇದರ ಬಗ್ಗೆ ನಾನು ಹೆಚ್ಚಿಗೆ ಏನನ್ನೂ ಕೂಡ ಹೇಳಲಾರೆ ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರಾದ ಬೊಮ್ಮಾಯಿಯವರೂ, ಮಾನ್ಯ ಟಿ. ಆರ್. ಶಾಮಣ್ಣನವರೂ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಮಾತ್ರ ಮಾನ್ಯಕಂದಾಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಏನೆಂದರೆ ಈ ಬೆಂಗಳೂರು ನಗರದಲ್ಲಿ ಬಾಡಿಗೆದಾರರ ಸಂಕಷ್ಟ ಏನು ? ಅವರ ತೊಂದರೆಗಳು ಏನು ಎನ್ನುವ ಬಗ್ಗೆ ಕರ್ನಾಟಕ ಬಾಡಿಗೆದಾರರ ಸಂಸ್ಥಾಪಕನಾದ ನಾನೂ, ಮಾನ್ಯ ಗುಂಡಯ್ಯ ಶೆಟ್ಟರು ಹಾಗೂ ಮಾನ್ಯ ನಾರಾಯಣ ಕುಮಾರ್‌ರವರೂ ಪರಸ್ಪರ ಸದಸ್ಯರೂ ಬಾಡಿಗೆದಾರರ ಅಭಿಪ್ರಾಯಗಳನ್ನು ಸಂಗ್ರಹಿಸಿ ಹಿಂದಿನ ಕಂದಾಯ ಸಚಿವರಾಗಿದ್ದ ಮಾನ್ಯ ಹುಚ್ಚಮಾಸ್ತಿಗೌಡರಿಗೆ ಒಂದು (ಮನವಿ ಪತ್ರ) ಮೆಮೋರ್ಯಾಂಡಂನ್ನು ಕೊಟ್ಟಿದ್ದೆವು. ಆದರೆ ಅವರು ನಮ್ಮ ಮನವಿ ಪತ್ರದ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಮುಂದೆ ತರುವ ಸಮಗ್ರ ತಿದ್ದುಪಡಿ ತರುವಾಗ್ಗೆ ಈ ಸರ್ಕಾರ ನಾವು ಹಿಂದೆ ಕೊಟ್ಟಿದ್ದ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಆಕ್ಟ್‌ನಲ್ಲಿ ತಿದ್ದುಪಡಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಹೇಳುವುದಾದರೆ, ಈ ರೆಂಟ್ ಕಂಟ್ರೋಲ್ ಆಫೀಸಿನಿಂದ ಯಾರಿಗೂ ಸರಿಯಾಗಿ ಮನೆಗಳೇ ಸಿಕ್ಕುತ್ತಿಲ್ಲ. ಮನೆಗಳಿಗೆ ಅರ್ಜಿ ಹಾಕಿದರೆ ಅದಕ್ಕೆ ಪ್ರಯಾರಿಟಿ ಇಲ್ಲ. ೧೬೦ ರೂಪಾಯಿ ಬಾಡಿಗೆಯೊಳಗಿರುವ ಮನೆಗಳನ್ನು ಕೊಡಲು ಡಿವಿಜನಲ್ ಕಮಿಷನರ್‌ರವರು ಸರಕಾರಿ ನೌಕರರಿಗೆ ಶಿಪಾರಸು ಮಾಡುತ್ತಾರೆ. ೧೬೦ ರೂಪಾಯಿಗಿಂತಲೂ ಹೆಚ್ಚಿಗೆ ಬಾಡಿಗೆ ಇರುವ ಮನೆಗಳನ್ನು ಅಲಾಟ್ ಮಾಡಲು ಕಂದಾಯ ಸಚಿವರು ಶಿಫಾರಸು ಮಾಡುತ್ತಾರೆ. ಈ ಮನೆಗಳಾದರೂ ಯಾರಿಗೆ ಸಿಕ್ಕುತ್ತವೆಂದು ನೋಡಿದರೆ ಸರ್ಕಾರಿ ನೌಕರಿಯಲ್ಲಿರತಕ್ಕವರಿಗೆ ಮಾತ್ರ. ಬೇರೆ ಶ್ರೀಸಾಮಾನ್ಯನಿಗೆ ಈ

ಮನೆಗಳು ಸಿಕ್ಕುವುದಿಲ್ಲ. ಹರಿಜನ ಗಿರಿಜನ ಸರಕಾರಿ ನೌಕರರಿಗೂ ಸಿಕ್ಕುತ್ತಿಲ್ಲ ಆದ್ದರಿಂದ ಈ ಬಾಡಿಗೆ ಮನೆಗಳು ಹೆಚ್ಚಾಗಿ ಬಡವರಿಗೇ ಹರಿಜನ ಗಿರಿಜನರಿಗೆ ಸಿಕ್ಕುವಂತೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಮತ್ತು ಅವರಂಗಳಿಗೆ ಉಪಯೋಗಿಸಲು ೧೮% ರಂತೆ ಕಾದಿರಿಸಲು ತಿದ್ದುಪಡಿ ಮಾಡಬೇಕು ಅಂತಾ ಒತ್ತಾಯಿಸುತ್ತೇನೆ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಂಗಿಸುತ್ತೇನೆ.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯಿದೆಗೆ ತಿದ್ದುಪಡಿಯನ್ನು ೧೯೬೧ ಮತ್ತು ೧೯೬೬ರಲ್ಲಿ ತಂದಿದ್ದೀರಿ. ಇದು ನನಗನಿಸುತ್ತದೆ ಇದೆಲ್ಲಕೂ ಒಂದು ಸಮರ್ಪಾವಾದ ತಿದ್ದುಪಡಿಯನ್ನು ತಂದರೆ ಒಳ್ಳೆಯದು ಎಂದು. ಏಕೆಂದರೆ ಆಕ್ಟೋಬರ್೧೯೬೫ ಮತ್ತು ೧೨ನೇಮಾರ್ಚಿ ೧೯೬೬ರಲ್ಲಿ ತಂದಿರತಕ್ಕ ತಿದ್ದುಪಡಿಗಳು ಏನಿವೆ ಇವೆಲ್ಲಾ ನಮ್ಮ ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಇದ್ದಾಗ ತ್ಮದಿದ್ದುದು. ಆಗ ತಾವು ಏನು ಈ ತಿದ್ದುಪಡಿಯನ್ನು ತಂದಿದ್ದೀರಿ ಆದರಿಂದ ಬೆಂಗಳೂರು ನಗರದ ಜನತೆಗೆ ಮಹತ್ತರವಾದ ಅನ್ಯಾಯವಾಗಿದೆ. ತಮಗೆಲ್ಲಾ ಗೊತ್ತಿರುವಂತೆ ಮಾನ್ಯ ಮುಖ್ಯ ಮಂತ್ರಿಗಳು ''growth is not in commensurate with the need''ಎಂದು ಹೇಳಿದರು. ಇವತ್ತು ಈ ಬೆಂಗಳೂರು ನಗರದಲ್ಲಿ ಎಷ್ಟು ಮನೆಗಳ ಅಗತ್ಯತೆ ಇದೆ ಆ ಅಗತ್ಯಕ್ಕೆ ತಕ್ಕಂತೆ ಮನೆಗಳು ನಿರ್ಮಾಣವಾಗುತ್ತಿಲ್ಲ. ಇದಕ್ಕೆ ಕಾರಣ ಎಂದರೆ ಈ ಕಾಯಿದೆ. ಇವತ್ತು ಕೆಲವು ಜನ ಹಣವುಳ್ಳವರು ಬಾಡಿಗೆಗೋಸ್ಕರ ಏನು ಮನೆಗಳನ್ನು ಕಟ್ಟಿಸುತ್ತಿದ್ದರು. ಆ ಮನೆಗಳನ್ನು ಅವರು ಕಟ್ಟಿಸುತ್ತಿಲ್ಲ. ಅದೇ ರೀತಿ ಮನೆಗಳು ಇರುವವರು ಬೇರೆಯವರಿಗೆ ಮನೆಗಳನ್ನು ಬಾಡಿಗೆ ಕೊಡುವುದಕ್ಕೆ ಇಷ್ಟಪಡುತ್ತಿಲ್ಲ. ಇದರಿಂದ ಜನಗಳಿಗೆ ಬಹಳ ತೊಂದರೆಯಾಗಿದೆ. ಇವತ್ತು ಪೋಲಿಸ್ ಸ್ಟೇಷನ್‌ಗೆ ಹೋಗುತ್ತಿರುವ ಕೇಸ್‌ಗಳಲ್ಲಿ ಬಹಳಷ್ಟು ಬಾಡಿಗೆದಾರ ಮತ್ತು ಮನೆ ಮಾಲೀಕರ ಮಧ್ಯೆ ತಿಕ್ಕಾಟ. ಹೊಡೆದಾಟಗಳಾಗಿರುವುವು. ಇದರ ಜೊತೆಗೆ ಇನ್ನೊಂದು ಸಾಮಾಜಿಕ ಅನ್ಯಾಯ ಏನಾಗಿದೆ ಅಂದರೆ ಬೆಂಗಳೂರಿಗೆ ವಲಸೆ ಬರತಕ್ಕವರಿಗೆ ಮತ್ತು ಇಲ್ಲಿನ ಕೆಲಸಕಾರ್ಯಗಳಿಗೆ ಬರತಕ್ಕ ಜನರು ಯಾರಿದ್ದಾರೆ ಅವರಿಗೆ ಸರಿಯಾದ ವಸತಿ ಸೌಕರ್ಯ ಸಿಕ್ಕುತ್ತಿಲ್ಲ. ಬೆಂಗಳೂರಿನಲ್ಲಿ ಲಾಡ್ಜಿಂಗ್ ಹೌಸಸ್ ಜಾಸ್ತಿಯಾಗುತ್ತಿವೆ. ಅದಕ್ಕೆ ಸಿಕ್ಕಾಪಟ್ಟೆ ಬಾಡಿಗೆ ಕೊಡಬೇಕಾಗಿದೆ. ಇಷ್ಟೇ ಅಲ್ಲದೆ ಈ ಬೆಂಗಳೂರಿನಲ್ಲಿ ಉತ್ತಮವಾದ ಒಂದು ಮನೆ ಇಲ್ಲವೆಂದರೆ ಅಂಥವರಿಗೆ ಯಾರೂ ಹೆಣ್ಣು ಕೊಡುವುದಿಲ್ಲ. ಇದರಿಂದಾಗಿ ಬೆಂಗಳೂರಿನಲ್ಲಿ ಬರೀ ಬ್ರಹ್ಮಚಾರಿಗಳೇ ಜಾಸ್ತಿಯಾಗಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಈ ಕಾರಣದಿಂದಲೇ ಮಾನ್ಯ ರಾಮದೇವ್‌ರವರು ಇನ್ನೂ ಬ್ರಹ್ಮಚಾರಿಗಳಾಗಿಯೇ ಇದ್ದಾರೆ.

ಶ್ರೀ ಪಿ. ರಾಮದೇವ್.—ಒಂದು ಉತ್ತಮವಾದ ವೆಂಟಿಲೇಷನ್ ಇರುವ ಒಂದು ಚಿಕ್ಕ ರೂಂ ಕೂಡ ಇವತ್ತು ಸಿಕ್ಕುವುದು ಕಷ್ಟವಾಗಿದೆ. ಇದಕ್ಕೆಲ್ಲಾ ಕಾರಣ ಈ ತಿದ್ದುಪಡಿಗಳು. ಸ್ವಾಮಿ, ಈ ಸಂದರ್ಭದಲ್ಲಿ ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ೧೯೬೮ರಲ್ಲಿ ಮಲ್ಲೇಶ್ವರಂನಲ್ಲಿ ಒಂದು ಮನೆ ಖಾಲಿ ಇತ್ತು. ಅದಕ್ಕೆ ನಾನೂ ಅರ್ಜಿ ಹಾಕಿದ್ದೆ, ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ದೇವರಾಜ ಅರಸ್‌ರವರೂ ಕೂಡ ಹಾಕಿದ್ದರು. ಆಗ ಅವರು ಕಾಂಗ್ರೆಸ್ ಪಕ್ಷದ ಕನ್ವೀನರ್ ಆಗಿದ್ದುದರಿಂದ, ಅವರಿಗೆ ಹೆಚ್ಚು ಪ್ರಭಾವ ಇದ್ದುದರಿಂದ ಆ ಮನೆ ಅವರಿಗೇ ಅಲಾಟ್ ಆಯಿತು. ಆದ್ದರಿಂದ ನಾನು ಹೇಳುವುದೇನೆಂದರೆ ಯಾವ ಕೆಲಸವೇ ಆದರೂ ಪ್ರಭಾವ ಶಾಲಿಗಳಾಗಿರುವವರ ಕಡೆಗೇ ಆಗುತ್ತವೆ. ಈ ಬಾಡಿಗೆ ನಿಯಂತ್ರಣ ಕಾನೂನಿನಿಂದ ಶ್ರೀಸಾಮಾನ್ಯನಿಗೆ ಯಾವುದೇ ವಿಧವಾದ ಅನುಕೂಲವೂ ಕೂಡ ಆಗುವುದಿಲ್ಲ. ಆದೂ ಹೋಗಲಿ ರೆಂಟ್‌ನ್ನಾದರೂ ಕಂಟ್ರೋಲ್ ಮಾಡಿದ್ದಾರೆಯೇ ಎಂದು ನೋಡಿದರೆ, ಬಾಡಿಗೆ ನಿಯಂತ್ರಣಾಧಿಕಾರಿಗಳು ಸ್ವಾಮಿ ನಮಗೆ ಸಿಬ್ಬಂದಿ ಬಹಳ ಕಡಿಮೆ ಇದೆ. ನಾವು ನಗರದ ಎಲ್ಲ ಮನೆಗಳನ್ನೂ ಪರಿಶೀಲನೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿಯಲ್ಲಿ ಸುಮಾರು ೬ ಜನ ಇನ್‌ಸ್ಪೆಕ್ಟರ್‌ಗಳು ಇರಬಹುದು. ಇವರು ಎಲ್ಲಾ ಕಡೆಗೂ ಹೋಗಿ ನೋಡುವುದಕ್ಕಾಗುವುದಿಲ್ಲ. ಆದುದರಿಂದ ನಾನು ಹೇಳುವುದೇನೆಂದರೆ ಈ ಬಾಡಿಗೆ ನಿಯಂತ್ರಣ ಕಾನೂನನ್ನು ಸಡಿಲಗೊಳಿಸಿ ಖಾಸಗಿಯವರು ಹೆಚ್ಚು ಹೆಚ್ಚು ಮನೆಗಳನ್ನು ಬಾಡಿಗೆಗೋಸ್ಕರ ಕಟ್ಟುವಂತೆ ಅನುಕೂಲ ಮಾಡಿಕೊಡಬೇಕು. ಈಗ ತಾವು ಮನೆಗಳನಕ್ಕ ಅಲಾಟ್ ಮಾಡುತ್ತಿರುವುದೂ ಕೂಡ ರಾಜ್ಯ ಸರ್ಕಾರದ ನೌಕರರಿಗೆ, ಕೇಂದ್ರ ಸರ್ಕಾರದ ನೌಕರರಿಗೆ. ಆದರೆ ಶ್ರೀ ಸಾಮಾನ್ಯನಿಗೆ ಇದರ ಒಂದು ಪ್ರಯೋಜನ ದೊರೆಯುತ್ತಿಲ್ಲ. ಕೊನೆಯಲ್ಲಿ ನಾನು ಕೇಳಿಕೊಳ್ಳುವು

ದೇನೆಂದರೆ ಈ ಬಾಡಿಗೆ ನಿಯಂತ್ರಣ ಕಾನೂನನ್ನು ಶ್ರೀಸಾಮಾನ್ಯನಿಗೂ ಅನುಕೂಲವಾಗುವಂತೆ ಸಮಗ್ರವಾಗಿ ತಿದ್ದುಪಡಿ ಮಾಡಬೇಕೆಂದು ಸೂಚಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. BASAVALINGAPPA.—Sir, I submitted earlier that the comprehensive amendment to the existing House Rent Control Act is before us and the date for scrutiny of the amendments is also fixed, and I am going to introduce it in the present Session. I do not know why hon. members are taking the trouble of explaining the various provisions of the Act. When the amendments are brought before the House, hon. members will have ample opportunity to discuss the amendments. Hon. member Sri T. R. Shamanna has spoken on this subject for hours in the previous Assembly and we have taken note of all his suggestions and have formulated the amendments, we are going to scrutinise them in a day or two and place them before this House. The present amending Bill is merely an extension of time which has lapsed.

MR. SPEAKER.—In the light of the explanation given by the Hon'ble Minister for Revenue we may cut short the discussion.

SRI B. B. SAYANAK.—The previous Revnue Minister Sri N. Hutchmasthy Gowda had assured this House that he is going to bring in a comprehensive Bill, but it was not done. Now, my hon. friend Sri B. Basavalingappa is the Minister for Revenue. Let him assure this House in how many months he is going to bring in the amendments.

MR. SPEAKER.—The Chief Minister has already assured this House that he will see that amendments are brought during the course of this session.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಈ ಅಧಿವೇಶನ ಮುಗಿಯುವುದರೊಳಗೇ ಒಂದು ಸಮಗ್ರ ತಿದ್ದುಪಡಿಯನ್ನು ಈ ಕಾಯಿದೆಗೆ ತರುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ವಂದನೆಗಳು. ಅವರು ಹೇಳಿದಂತೆ ನಡೆಯುತ್ತಾರೆ ಎನ್ನುವ ಭರವಸೆ ನಮಗೆ ಇದೆ. ಈಗ ಈ ಸಭೆಗೆ ಹೊಸ ಸದಸ್ಯರು ಬಂದಿದ್ದಾರೆ. ಈ ಕಾಯಿದೆಗೆ ತಿದ್ದುಪಡಿಯನ್ನು ತರುವುದಕ್ಕೆ ಮುಂಚೆ ಹೊಸ ಸದಸ್ಯರ ಅಭಿಪ್ರಾಯವನ್ನೂ ಕೇಳಿದರೆ ಒಳ್ಳೆಯದು.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಅಧಿವೇಶನದಲ್ಲಿಯೇ ಈ ಒಂದು ರೆಂಟ್ ಕಂಟ್ರೋಲ್ ಮಸೂದೆಯ ಬಗ್ಗೆ ಸಮಗ್ರವಾದ ಒಂದು ತಿದ್ದುಪಡಿಯನ್ನು ತರುತ್ತೇವೆ ಎಂದು ಹೇಳಿದರು. ಆದರೆ ಯಾವುದನ್ನು ಅವರು ಇದರಲ್ಲಿ ತಿದ್ದುಪಡಿ ತರುವುದಕ್ಕೆ ಸಾಧ್ಯವಿಲ್ಲವೋ ಅದರ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಯಾವ ಒಂದು ತಿದ್ದುಪಡಿಯನ್ನು ತರುವುದಕ್ಕೆ ಸಾಧ್ಯವಿಲ್ಲವೋ ಅಂಥಾ ಒಂದು ಕಾಯಿದೆಯನ್ನು ಮುಂದುವರಿಸುವುದು ಅಷ್ಟೇ ಜರೂರು ಇದೆ. ಇದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವುದೂ ಅಷ್ಟೇ ಜರೂರು ಇದೆ. ಆದ್ದರಿಂದ ಇದರ ಬಗ್ಗೆ ಮಾತ್ರ ನಾನು ಹೇಳಬೇಕಾಗಿದೆ. ನಮ್ಮ ಪಕ್ಷದ ನಾಯಕರೂ ಕೂಡ ಇದರ ಬಗ್ಗೆ ಹೇಳಿದ್ದಾರೆ. ಮೊಕದ್ದಮೆಗಳ ತೀರ್ಪನ್ನು ಶೀಘ್ರವಾಗಿ ಮಾಡತಕ್ಕ, ಕಾರಣವನ್ನು ನಿಗದಿ ಮಾಡಬೇಕು ಎಂದು ಹೇಳಿದ್ದಾರೆ. ಅದರ ಜೊತೆಗೆ ನಾನು ಹೇಳುವುದು ಬಹಳಷ್ಟು ಕಡೆಯಲ್ಲಿ ರೆಂಟ್ ಕಂಟ್ರೋಲ್ ಮೊಕದ್ದಮೆಗಳು ಕೋರ್ಟಿಗೆ ಹೋದಾಗ ಪರ್ಮನೆಂಟ್ ಆಗಿ ತಳ್ಳಿಕೊಂಡು ಹೋಗುತ್ತಾರೆ ಎಂದು ಈಗ ಈ ಕಾಯಿದೆಯನ್ನು ಮುಂದುವರಿಸುತ್ತಿದ್ದಾರೆ. ದೊಡ್ಡ ದೊಡ್ಡ ನಗರಗಳಾದ ಮೈಸೂರು, ಧಾರವಾಡ ಬೆಂಗಳೂರು ಮುಂತಾದ ನಗರಗಳಲ್ಲಿ ರೆಂಟ್‌ಕಂಟ್ರೋಲ್ ಮೊಕದ್ದಮೆಗಳ ಬಗ್ಗೆ ತೀರ್ಪುಕೊಡುವುದಕ್ಕೆ

ಪ್ರತ್ಯೇಕವಾದ ಮುನ್ಸೀಫ್ ಕೋರ್ಟುಗಳು ಬೇಕು. ಇದನ್ನು ಮಾಡುವುದು ಬಹಳ ಅಗತ್ಯ ಇದೆ. ಅದಕೆ ಅವಕಾಶವನ್ನು ಮಾಡಿಕೊಡಬೇಕಾದ ಅವಶ್ಯಕತೆ ಇದೆ. ಈಗ ನಾವು ಸುಮಾರು ಒಂದೂವರೆ ವರ್ಷದಿಂದ ನೋಡುತ್ತಿದ್ದೇವೆ. ೫೫ ಮುನ್ಸೀಫ್ ಕೋರ್ಟುಗಳಲ್ಲಿ ಮುನ್ಸಿಫರುಗಳಿಲ್ಲ. ಇದರಿಂದಾಗಿ ರಾಮನಗರದಲ್ಲಿ ೬ ತಿಂಗಳಿಂದ ಮುನ್ಸೀಫ್ ಕೋರ್ಟಿನಲ್ಲಿ ನ್ಯಾಯಾಧೀಶರಿಲ್ಲವೆಂದು ಹೇಳಲಾಗಿದೆ. ಈ ಒಂದು ಶಾಸನವನ್ನು ಮುಂದುವರಿಸುವುದು ಎಷ್ಟು ಅವಶ್ಯಕ ಇದೆಯೋ ಅಷ್ಟೇ ಈ ಕೇಸುಗಳನ್ನು ಆದಷ್ಟು ಬೇಗ ತೀರ್ಮಾನ ಮಾಡುವುದಕ್ಕೆ ವ್ಯವಸ್ಥೆ ಮಾಡುವುದು ಅವಶ್ಯಕ. ರೆಂಟ್ ಕಂಟ್ರೋಲ್ ಮೊಕದ್ದಮೆಗಳನ್ನು ಬೇಗ ತೀರ್ಮಾನ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಎರಡನೆಯದಾಗಿ ಮನೆಗಳನ್ನು ಹಂಚಿಕೆಯ ವಿಷಯದಲ್ಲಿ ಹೇಳುವುದಾದರೆ ಇದು ರೆಂಟ್ ಕಂಟ್ರೋಲ್ ಅಥಾರಿಟಿಯವರಿಂದ ಶೀಘ್ರವಾಗಿ ಆಗುತ್ತಾ ಇಲ್ಲ. ಇದರ ಪರಿಣಾಮವಾಗಿ ಮೈಸೂರು ನಗರಕ್ಕೆ ಮುನ್ಸೀಫರು ಗಂಟು ಮೂಟೆ ಕಟ್ಟಿಕೊಂಡು ಬಂದರೆ ಅವರಿಗೆ ವಾಸಕ್ಕೆ ಮನೆ ಸಿಕ್ಕದೆ ಅವರು ತಿಂಗಳು ಗಟ್ಟಲೆ ರಜಾ ಹಾಕಿ ಅವರು ಊರಿಗೆ ಹೋಗಿದ್ದಾರೆ. ಇದರಿಂದಾಗಿ ನಾಯಾಲಯಗಳಲ್ಲಿ ನ್ಯಾಯಾಧೀಶರೂ ಕೂಡ ಸಿಕ್ಕುತ್ತಿಲ್ಲ. ಆದ್ದರಿಂದ ಇದರ ಕಡೆಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕು.

ಮೂರನೆಯದಾಗಿ ಬಹುಶಃ ಈ ಕ್ರಾಯಿದೆಯನ್ನು [ಮುಂದುವರಿಸಬೇಕಾದ ಅಗತ್ಯ ಇರಲಿಲ್ಲ ಎಂದು ನಾನು ಭಾವಿಸುತ್ತೇನೆ. ಒಂದೇ ಕಾರಣಕ್ಕಾಗಿ ಇದನ್ನು ಮುಂದುವರಿಸಬೇಕಾಗಿದೆ. ಅದಕ್ಕೆ ಪ್ರಮುಖ ಕಾರಣ ಯಾವುದು ಎಂದರೆ ಇಂದಿನ ಮುಖ್ಯ ಮಂತ್ರಿಗಳು ಹಿಂದೆ ಮುಖ್ಯ ಮಂತ್ರಿಗಳಾಗಿ ದ್ದಾಗ ಒಂದು ಕಡೆ ಭಾಷಣ ಮಾಡುತ್ತಾ ಒಂದು ಮಾತು ಹೇಳಿದ್ದಾರೆ. ಅದು ಏನೆಂದರೆ ಯಾರು ಯಾರು ನಗರಗಳಲ್ಲಿ ಮನೆಗಳನ್ನು ಇಟ್ಟುಕೊಂಡಿದ್ದಾರೆಯೋ ಅವರು ಸ್ವಲ್ಪ ಎಚ್ಚರಿಕೆಯಿಂದ ಇರಬೇಕು ಎಂದು ಮಾತನಾಡಿದ್ದರ ಪರಿಣಾಮವಾಗಿ ಮೈಸೂರು ನಗರದಲ್ಲಿ ಸಾವಿರಾರು ಮನೆಗಳು ಖಾಲಿ ಇದ್ದರೂ ಅಲ್ಲಿ ಜನಗಳು ಮನೆಗಳನ್ನು ಬಾಡಿಗೆಗೆ ಕೊಡುವುದಕ್ಕೆ ಅಂಜುತ್ತಾರೆ. ಆದ್ದರಿಂದ ಮನೆಗಳನ್ನು ಬಾಡಿಗೆ ಕೊಡುವ ವಿಷಯಕೆ ಸಂಬಂಧಪಟ್ಟ ಶಾಸನವನ್ನು ಸರಿಯಾದ ರೀತಿಯಲ್ಲಿ ರೂಪಿಸದೇ ಹೋದರೆ ಈಗ ೫ ವರ್ಷ ನಮ್ಮ ಸಭೆಯ ಅಧ್ಯಕ್ಷರು ಅಧ್ಯಕ್ಷ ಪೀಠದಲ್ಲಿದ್ದರೆ ಅವರದೇ ಈ ಸ್ಥಾನ ಎಂದು ಹೇಳಿದರೆ ಜನ ಗಳಿಗೆ ಅಂಜಿಕೆ ಬಂದು ಮನೆಗಳನ್ನು ಯಾರೂ ಬಾಡಿಗೆ ಕೊಡುವುದಕ್ಕೆ ತಯಾರು ಇಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಯೋಚನೆ ಮಾಡಿ ಜನಗಳು ಮನೆ ಗಳನ್ನು ಬಾಡಿಗೆಗೆ ಕೊಡುವುದಕ್ಕೆ ಅನುಕೂಲವಾಗುವಂತೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳು ತ್ತೇನೆ. ಆ ರೀತಿ ಸರ್ಕಾರದವರು ವ್ಯವಸ್ಥೆ ಮಾಡುವುದಾದರೆ ಸಾಕಷ್ಟು ಜನಗಳಿಗೆ ಮನೆಗಳು ಬಾಡಿಗೆಗೆ ಸಿಕ್ಕುವುದಕ್ಕೆ ಸಾಧ್ಯವಿದೆ. ಮತ್ತು ಸಾಕಷ್ಟು ಮನೆಗಳನ್ನು ಬಾಡಿಗೆಗೆ ಕೊಡುವುದಕ್ಕೆ ಜನಗಳು ಮುಂದೆ ಬರುತ್ತಾರೆ. ಈಗ ಮಾನ್ಯ ಸಚಿವರು ತಿದ್ದುಪಡಿಯನ್ನು ಏನು ತರಬೇಕೆಂದಿದ್ದಾರೆ ಅದರಲ್ಲಿ ಮನೆಗಳ ಬಗ್ಗೆ ನಡೆಯತಕ್ಕ ಮೊಕದ್ದಮೆಗಳ ಬಗ್ಗೆ ಶೀಘ್ರವಾಗಿ ತೀರ್ಪು ಕೊಡುವಂಥಾದ್ದನ್ನು ಅಳವಡಿಸಬೇಕು. ಈಗ ಮೈಸೂರಿನಲ್ಲಿ ಒಂದೇ ಒಂದು ಮುನ್ಸೀಫ್ ಕೋರ್ಟ್ ಇದೆ. ರೆಂಟ್‌ಕಂಟ್ರೋಲಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ತೀರ್ಮಾನ ಮಾಡುವುದಕ್ಕೆ ಪ್ರತ್ಯೇಕವಾದ ಕೋರ್ಟ್ ಇಲ್ಲ. ಇದರಿಂದಾಗಿ ಮೈಸೂರಿನಲ್ಲಿ ಸಾಕಷ್ಟು ರೆಂಟ್‌ಕೆಂಟ್ರೋಲಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ತೀರ್ಮಾನ ಮಾಡು ವುದಕ್ಕೆ ಸಾಧ್ಯವಾಗಿಲ್ಲ. ಆದಕಾರಣ ಈ ಮೊಕದ್ದಮೆಗಳು ೫ ವರ್ಷ ೬ ವರ್ಷ ಆದರೂ ತೀರ್ಮಾನ ವಾಗುವುದಿಲ್ಲ. ಮುನ್ಸೀಫ್ ಕೋರ್ಟಿನಲ್ಲಿ ತೀರ್ಮಾನವಾದಂತಹ ಕೆಲವು ಕೇಸುಗಳು ಡಿಸ್ಟ್ರಿಕ್ಟ್ ಕೋರ್ಟಿ ನಲ್ಲಿ ತೀರ್ಮಾನವಾಗಬೇಕಂ, ಆದರೆ ಮೈಸೂರಿನಲ್ಲಿ ಒಂದೇ ಡಿಸ್ಟ್ರಿಕ್ಟ್ ಕೋರ್ಟ್ ಇದೆ. ಆ ಒಂದು ಡಿಸ್ಟ್ರಿಕ್ಟ್‌ನಲ್ಲಿ ಲ್ಯಾಂಡ್ ಅಕ್ವಿಜಿಷನ್ ಕೇಸುಗಳು ಸೆಷನ್ ಕೇಸುಗಳು ಅಪೀಲುಗಳು ಇರುತ್ತವೆ. ಇದರಿಂದ ಸಾವಿರಾರು ಕೇಸುಗಳು ಮೈಸೂರು ನಗರದ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ತೀರ್ಮಾನವಾಗದೆ ಉಳಿದಿವೆ. ಅಲ್ಲಿ ಒಂದೇ ಜಿಲ್ಲಾ ನ್ಯಾಯಾಧೀಶರ ಕೋರ್ಟು ಇರುವುದರಿಂದ ಅಲ್ಲಿ ಎಷ್ಟು ಕೇಸುಗಳು ತೀರ್ಮಾನವಾಗುತ್ತವೆ ಎಂಬುದನ್ನು ಸರ್ಕಾರದವರು ಗಮನಿಸಬೇಕು. ಇದರ ಜೊತೆಗೆ ರೆಂಟ್‌ಕೆಂಟ್ರೋಲ್ ಆಕ್ಟಿನಿಂದ ಸಾಮಾನ್ಯ ಜನತೆಗೆ ಎಷ್ಟರಮಟ್ಟಿನ ಪ್ರಯೋಜನ ದೊರೆಯುತ್ತಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಗಮನಿಸ ಬೇಕು. ಇಷ್ಟು ಹೇಳಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ಒಂದು ತಿದ್ದುಪಡಿಯನ್ನು ತರುವಂತಹ ಆಶ್ವಾ ಸನೆಯನ್ನು ಕೊಟ್ಟಿರುವುದರಿಂದ ಈ ಕಾನೂನನ್ನು ಮುಂದುವರಿಸಬಹುದು ಎಂದು ನಿವೇದಿಸಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

† SRI P. A. PAWASHE (Uchegaon).—I am not opposed to the Extension of this Act, but with regard to Belgaum City I shall make out one or two points That recently some areas have been newly included in the Belgaum City. The provisions of this Act were not made applicable to the tenants of those areas as result of which great hardship has caused to the tenants. The landlord have taken out eviction proceedings against the tenants under the Transfer of Property Act. These are adjacent areas of the Belgaum City and are newly developed. My request to the Government is that provision of this Act may be made applicable to the new areas included in the Belgaum City and the benefits should be given to the tenants residing in the new areas.

† SRI B. BASAVALINGAPPA.—The suggestions of Sri Pawashe are pending for long and they have to be considered. I shall try to incorporate them in the Act. I do not think this debate requires a reply. I may assure the House that I would bring a comprehensive Act. I shall bring it in the current session itself unless it is postponed for some reason. I shall bear in mind the suggestions made by the hon. members. The leader of the Opposition Sri S. R. Bommai has placed some confidence in me. When I say something, I am going to do it. I think all the hon. members will have faith in me.

MR. SPEAKER.—The question is :

"That the Karnataka Rent Control (Amendment) Bill, 1978 be taken into consideration."

The motion was adopted

CLAUSE 2

MR. SPEAKER.—Sri T. R. Shamanna has given notice of some amendments to this Bill. He may move his amendment.

SRI T. R. SHAMANNA (Basavanagudi).—I seek the permission of the Chair to move the following amendment.

"That in clause 2 for the words and figures 31st December, 1982", the words and figures "31st December, 1978" shall be substituted."

The question was proposed

† ಶ್ರೀ ಟಿ. ಆರ್. ಶಾಮಣ್ಣ .—ಮಾನ್ಯ ಅಧ್ಯಕ್ಷರೇ ನಾನು ನನ್ನ ತಿದ್ದುಪಡಿಯನ್ನು ಕೊಡ ತಕ್ಕಂಥಾ ಸಂದರ್ಭದಲ್ಲಿ ನನಗೆ ಒಂದು ಭಯವೆನಿತ್ತು ಏಂದರೆ ಒಂದೇ ಸಾರಿ ಇದನ್ನು ೫ ವರ್ಷ ಮುಂದಕ್ಕೆ ಹಾಕಿದರೆ ಇದು ೫ ವರ್ಷಗಳ ತನಕ ನಿದ್ದೆ ಮಾಡುತ್ತಬೆ, ಇದು ೫ ವರ್ಷಗಳ ತನಕ ಬದ

ಲಾವಣಿಯಾಗುವುದಿಲ್ಲ ಎಂದರೆ ಜನಗಳಿಗೆ ಬಹಳ ತೊಂದರೆಯಾಗುತ್ತದೆ ಎನ್ನುವ ಉದ್ದೇಶದಿಂದ ನಾನು ನನ್ನ ತಿದ್ದುಪಡಿಯನ್ನು ಕೊಟ್ಟೆ. ಈಗಾಗಲೇ ಮಾನ್ಯ ಕಂದಾಯ ಸಚಿವರು ಸಾಧ್ಯವಾದಷ್ಟು ಬೇಗ ಸಮಗ್ರವಾದಂಥ ಮಸೂದೆಯನ್ನು ತೆಗೆದುಕೊಂಡು ಬರುತ್ತೇನೆಂದು ಆಶ್ವಾಸನೆಯನ್ನು ಹೇಳಿದ್ದಾರೆ. ಅವರು ಹೇಳಿರತಕ್ಕ ಪ್ರಕಾರ ನಡೆದುಕೊಳ್ಳುತ್ತಾರೆ ಎಂದು ನನಗೆ ಸ್ವಲ್ಪ ಅನುಭವ ಇದೆ. ಆದುದರಿಂದ ಅದರ ಹೇಳಿಕೆಯ ಮೇಲೆ ನಂಬಿಕೆ ಇಟ್ಟು ನಾನು ಈ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತೇನೆ. ಆದರೆ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಸಮಗ್ರವಾದ ಮಸೂದೆಯನ್ನು ತರುವುದಕ್ಕೆ ತಡವಾದ ಪಕ್ಷದಲ್ಲಿ ಕೆಲವು ವಿಚಾರಗಳ ಬಗ್ಗೆಯಾದರೂ ಕೂಡ ಸೂಕ್ತವಾದ ಆದೇಶಗಳನ್ನು ಕೊಟ್ಟು ಮನೆ ನ್ಯಾಯವಾಗಿ ಯಾರಿಗೆ ದೊರಕ ಬೇಕೋ ಅವರಿಗೆ ದೊರಕುವ ಹಾಗೆ ಮಾಡಬೇಕು. ಯದ್ವಾತದ್ವ ಬಾಡಿಗೆಯನ್ನು ಹೆಚ್ಚಿಸದೇ ಇರುವಂತೆ ಮಾಡಬೇಕು. ಟಿನೆಂಟ್ ಮತ್ತು ಲ್ಯಾಂಡ್‌ಲಾರ್ಡ್ಸ್ ಸಮಸ್ಯೆಗಳು ಏನು ಎಂದು ತಿಳಿದುಕೊಂಡು ತಿದ್ದುಪಡಿಯನ್ನು ತರುವುದಕ್ಕೆ ಸಾಧ್ಯವಾದಷ್ಟು ಬೇಗ ಪ್ರಯತ್ನ ಮಾಡಬೇಕು. ಸಮಗ್ರವಾದ ಮಸೂದೆಯನ್ನು ತರುವುದಕ್ಕೆ ಏನಾದರೂ ತಡವಾದರೆ ಈ ಸಮಸ್ಯೆಗಳನ್ನು ಸರಿಪಡಿಸಬೇಕು ಎಂದು ಹೇಳಿ ನಾನು ಮಂಡಿಸಿರುವ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

MR. SPEAKER.—Is it the pleasure of the House to permit the Member to withdraw his amendment.

'Hon'ble Members,' Yes

The amendment was, by leave withdrawn

MR. SPEAKER,—The question is:

"That clause 2 do stand part of the Bill"

The motion was adopted

Clause 2 was added to the Bill

CLAUSE 3

MR. SPEAKER,—The question is :

"That clause 3 do stand part of the Bill"

The motion was adopted

Clause 3 was added to the Bill

CLAUSE 1 ETC

MR. SPEAKER.—The question is :

"That Clause 1, the long Title the preamble and the Enacting formula do stand part of the Bill".

(*The motion was adopted*)

Clause 1, the long Title the Preamble and the Enacting formula were added to the Bill.

MOTION TO PASS

SRI B. BASAVALINGAPPA.—I beg to move :

"That the Karnataka Rent Control (Amendment) Bill, 1978 be passed".

MR. SPEAKER.—The question is :

"That the Karnataka Rent Control (Amendment) Bill 1978 be passed".

The motion was adopted and the Bill was passed.

KARNATAKA RADIO AND ELECTRICAL COMPANY (ACQUISITION OF SHARES) BILL, 1978

Motion to consider

SRI AZEEZ SAIT (Minister for Commerce and Industries) : Sir, I beg to move :

"That the Karnataka Radio and Electrical Company (Acquisi-on of Shares) Bill, 1978 be taken into contideration"

The question was proposed

Sir, this is a Bill to replace the ordinance. The Radio Electricals Manufacturing Company was engaging in manufacturing Energy Meters, Cables, Capacitors, Radio and Television receivers, loud speakers etc. At the end of 74-75 the accumulated loss was Rs. 375,54 lakhs against the paid up capital of Rs, 212,50 lakhs. This is a State Public sector industry in which the State Government held shares of 80 per cent. About 10 per cent of the share was held by general public and 3.8 per cent was held by Unit Trust of India, Life Insurance Corporation of India etc., and the remaining share were held by private persons. It has not been possible to acquire those shares through negotiations. The total value of shares to be acquired from various institutions and the general public under this amounts to Rs. 29 86 lakhs. The proposed acquisition of shares being Rs. 3 per share of the face value of Rs. 10. So, this is a Bill to replace the ordinance.

† ಶ್ರೀ ಎಸ್. ಆರ್. ಬೊಮ್ಮಾಯಿ.—ಈ ರೆಂಕೋ ಹೆಸರುವಾಸಿಯಾದಂಥ, ಪ್ರಸಿದ್ಧವಾದಂಥ ಒಂದು ಉದ್ದಿಮೆ. ಇಂತಹ ಒಂದು ಉದ್ದಿಮೆ ರಾಜ್ಯ ಸರ್ಕಾರದಿಂದ ಕೈತಪ್ಪಿಹೋಗಿ ಇವತ್ತು ಕೇಂದ್ರ ಸರ್ಕಾರದ ಒಂದು ಸಂಸ್ಥೆಗೆ ಹೋಗುತ್ತಾ ಇದೆ. ಇದು ಸಂತೋಷದ ಸಂಗತಿಯಲ್ಲ. ರೆಂಕೋ ನಮ್ಮ ಕರ್ನಾಟಕ ರಾಜ್ಯದಲ್ಲಿ ಹೆಮ್ಮೆ ಪಡತಕ್ಕ ಒಂದು ಉದ್ದಿಮೆ. ಇದರಲ್ಲಿ ರಾಜ್ಯ ಸರ್ಕಾರ ಸಾಕಷ್ಟು ಹಣವನ್ನು ತೊಡಗಿಸಿದೆ. ಪರದೇಶಗಳಿಂದ ಉತ್ತಮವಾದ ಯಂತ್ರಗಳನ್ನು ತೆಗೆದುಕೊಂಡು ಬಂದು ರಾಜ್ಯದಲ್ಲಿ ಈ ಉದ್ದಿಮೆಯನ್ನು ಸ್ಥಾಪನೆ ಮಾಡಿದರು. ೧೯೬೮-೬೯ರಲ್ಲಿ ಈ ಉದ್ದಿಮೆಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸುವ ಸಲುವಾಗಿ ವಿಚಾರ ಬಂದಾಗ ಈ ಸಭೆಯಲ್ಲಿ ಆನೇಕ ಜನ ವಿರೋಧಮಾಡಿದೆವು.